ವಿಷಯ :- ಬಾದಾಮಿ ತಾಲ್ಲೂಕಿನ ಸಣ್ಣ ಮತ್ತು ಮದ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2358 (2765) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಬಾದಾಮಿ ತಾಲ್ಲೂಕಿನ ಕೆರೂರು ಪಟ್ಟಣಕ್ಕೆ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ಸೇರಿಸಲು ಸರ್ಕಾರದವರು ಪರಿಶೀಲಿಸುವರೇ?

2. ಹಾಗಿದ್ದಲ್ಲಿ 1995-96 ರಲ್ಲಿ ಅತೀ ಬಡವರಿರುವ ಕೆರೂರು ಪಟ್ಟಣಕ್ಕೆ ಈ ಯೋಜನೆಯಡಿಯಲ್ಲಿ ಸೇರಿಸಲು ನಿರ್ದಿಷ್ಟವಾಗಿ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):-

ಅ) ಸಧ್ಯಕ್ಕೆ ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ :- ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳ ಸಾಮರ್ಥ್ಯ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2359 (2975)

ಶ್ರೀ ಗೋವಿಂದ ಎಂ. ಕಾರಪೋಳ (ಮುಧೋಳ) :- ಮಾನ್ಯ ಸಕ್ಕರೆ, ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಯಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1995-96 ನೇ ಸಾಲಿನಲ್ಲಿ ಬೆಳೆದ ಕಬ್ಬಿನ ಪ್ರಮಾಣವೆಷ್ಟು (ಜಿಲ್ಲಾ ವಾರು ವಿವರ ಒದಗಿಸುವುದು) ;

ಆ) ರಾಜ್ಯದಲ್ಲಿ ಸಧ್ಯಕ್ಕಿರುವ ಸಕ್ಕರೆ ಕಾರ್ಖಾನೆಗಳೆಷ್ಟು ಮತ್ತು ಅರೆಯುವ ಸಾಮರ್ಥ್ಯವೆಷ್ಟು ;

ಇ) ಹೆಚ್ಚಿನ ಕಬ್ಬನ್ನು ಅರೆಯಲು ಸರ್ಕಾರ ಮಾಡಿದ ವ್ಯವಸ್ಥೆಗಳೇನು;

ಈ) 1994-95 ರಲ್ಲಿ ಬೆಳೆದ ಹೆಚ್ಚಿನ ಕಬ್ಬನ್ನು ನೆರೆ ರಾಜ್ಯಗಳಿಗೆ ಸಾಗಿಸಲು ಮುಕ್ತ ಪರವಾನಿಗೆ ನೀಡಲು ಸರ್ಕಾರಕ್ಕೆ ಆದ ತೊಂದರೆಗಳೇನು;

ಉ) 1994-95 ರಲ್ಲಿ ಸಕ್ಕರೆ ಕಾರ್ಖಾನೆಯವರು ಕಬ್ಬನ್ನು ಖರೀದಿ ಮಾಡದೇ ರೈತರಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು):-

ಅ) ರಾಜ್ಯದಲ್ಲಿ 1995-96 ನೇ ಸಾಲಿನಲ್ಲಿ ಸುಮಾರು 263 ಲಕ್ಷ ಟನ್ ಕಬ್ಬಿನ ಉತ್ಪಾದನೆಯಾಗುವ ಅಂದಾಜು ಇರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧ 'ಅ' ನಲ್ಲಿ ಇಡಲಾಗಿದೆ.

ಆ) ರಾಜ್ಯದಲ್ಲಿ ಸಧ್ಯಕ್ಕಿರುವ ಸಕ್ಕರೆ ಕಾರ್ಖಾನೆಗಳು 30 ಆಗಿವೆ. ಇವುಗಳ ಒಟ್ಟು ದಿನವಹಿ ಅರೆಯುವ ಕಬ್ಬಿನ ಸಾಮರ್ಥ್ಯ 71950 ಟನ್ ಗಳಾಗಿರುತ್ತದೆ.

ಇ) ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಭಾರತ ಸರ್ಕಾರದಿಂದ 8 ಪರವಾನಿಗೆಗಳನ್ನು ಪಡೆಯಲಾಗಿದೆ. ಜೊತೆಗೆ 17 ಅರ್ಜಿಗಳನ್ನು ಪರವಾನಿಗೆ ನೀಡಿಕೆಗಾಗಿ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದ್ದು ಸದರಿ ಅರ್ಜಿಗಳು ಕೇಂದ್ರ ಸರ್ಕಾರದ ಮುಂದೆ ಇವೆ. ಇದಲ್ಲದೆ, 24 ಅರ್ಜಿಗಳು ಇತ್ತೀಚಿಗೆ ಬಂದಿದ್ದು, ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿರುತ್ತವೆ.

ಈ) ತೊಂದರೆ ಆಗಿರುವುದಿಲ್ಲ. ಹೆಚ್ಚುವರಿ ಕಬ್ಬಿನ ಲಭ್ಯತೆ ಮನವರಿಕೆಯಾದ ಮೇಲೆ ನೆರೆ ರಾಜ್ಯಗಳಿಗೆ ಸಾಗಿಸಲು ಮುಕ್ತ ಪರವಾನಿಗೆ ನೀಡಲಾಗಿದೆ.

ಉ) ಇಲ್ಲ. ಆದರೆ ಹೆಚ್ಚುವರಿ ಕಬ್ಬಿನ ಸಮಸ್ಯೆಯಿಂದ ರೈತರಿಗೆ ತೊಂದರೆ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೆಚ್ಚುವರಿ ಕಬ್ಬಿನ ಲಭ್ಯತೆ ಮನವರಿಕೆಯಾದ ಮೇಲೆ ನೆರೆ ರಾಜ್ಯಗಳಿಗೆ ಸಾಗಿಸಲು ಮುಕ್ತ ಅನುಮತಿ ನೀಡಲಾಗಿದೆ.

1995-96 ನೇ ಸಾಲಿನ ಜಿಲ್ಲಾವಾರು ಕಬ್ಬಿನ ವಿಸ್ತೀರ್ಣ, ಉತ್ಪಾದನೆ ಹಾಗೂ ಉತ್ಪಾದಕತೆ, ಹೊಸಬೆಳೆ ಹಾಗೂ ಕೂಳೆ ಬೆಳೆ ವಿಸ್ತೀರ್ಣ ನಿಗದಿಪಡಿಸಿರುವ ಪಟ್ಟಿ.

ಕ್ರ.ಸಂ.	ಜಿಲ್ಲೆ	ವಿಸ್ತೀರ್ಣ	ಉತ್ಪಾದಕತೆ	ಉತ್ಪಾದಕತೆ	ಹೊಸಬೆಳೆ	ಕೊಳೆಬೆಳೆ
1	2	3	4	5	6	7
1)	ಬೆಂಗಳೂರು (ನ)	150	15600	104	90	60
2)	ಬೆಂಗಳೂರು (ಗ್ರಾ)	1300	133900	103	780	520
3)	ಕೋಲಾರ	3500	367500	105	2100	1400
4)	ತುಮಕೂರು	1500	157500	105	900	600
5)	ಶಿವಮೊಗ್ಗ	1500	1650000	110	9000	600
6)	ಚಿತ್ರದುರ್ಗ	7000	763000	109	4200	2800
7)	ಮೈಸೂರು	16000	1760000	110	9600	6400
8)	ಮಂಡ್ಯ	32000	3552000	111	19200	12800
9)	ಕೊಡಗು	50	5000	100	30	20

10) ಹಾಸನ	4000	420000	105	2400	1600
11) ಚಿಕ್ಕಮಗಳೂರು	2000	208000	104	1200	800
12) ದಕ್ಷಿಣ ಕನ್ನಡ	3000	309000	103	1800	1200
13) ಧಾರವಾಡ	5000	525000	105	3000	2000
14) ಉತ್ತರ ಕನ್ನಡ	2500	257500	103	1500	1000
15) ಬೆಳಗಾಂ	90000	9000000	100	54000	36000
16) ಬಿಜಾಪುರ	40000	4032000	101	24000	16000
17) ರಾಯಚೂರು	5200	560000	108	3120	2080
18) ಬಳ್ಳಾರಿ	5000	540000	108	3000	2000
19) ಗುಲ್ಬರ್ಗಾ	5000	520000	104	3000	2000
20) ಬೀದರ್	15000	1560000	104	9000	6000
ಒಟ್ಟು	253000	26336000	104	151800	101200

ವಿಷಯ :- ಹುಬ್ಬಳ್ಳಿ ನಗರದಲ್ಲಿ ಕಟ್ಟಡ ಕಟ್ಟಿಸಲು ಪರವಾನಿಗೆ ನೀಡುವ ಬಗ್ಗೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2360 (930)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ 1992 ಜನವರಿಯಿಂದ 31-7-95 ರ ತನಕ ಕಟ್ಟಡ ಕಟ್ಟಿಸುವ ಕುರಿತು ಪರವಾನಿಗೆ ಸಲುವಾಗಿ ಬಂದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು;

ಆ) ಅವುಗಳಲ್ಲಿ ಎಷ್ಟು ಅರ್ಜಿಗಳ ವಿಲೇವಾರಿ ಆಗಿದೆ.;

ಇ) ಬಾಕಿ ಅರ್ಜಿಗಳ ವಿಲೇವಾರಿ ಆಗದೆ ಇರಲು ಕಾರಣವೇನು?

ಶ್ರೀ ವೆಜಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) 4,225

ಆ) 3, 553

ಇ) ಬಾಕಿ ಅರ್ಜಿಗಳ ವಿಲೇವಾರಿ ಆಗದೇ ಇರಲು ಪ್ರಮುಖವಾದ ಕಾರಣಗಳು ಈ ಕೆಳಗಿನಂತಿವೆ :-